ಕರ್ನಾಟಕ ಸರ್ಕಾರ

## ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–01

ಸಂಖ್ಯೆ:ಇ–ಆಡಳಿತ:ಮಂ.ಹು.ಪ:01/2020–21 ದಿನಾಂಕ:–09–09–2020

**–: ಜ್ಞಾಪನಾ :–**

ವಿಷಯ:– ಶಾಲಾವಾರು ಮಂಜೂರಾದ ಹುದ್ದೆ, ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಮಾಹಿತಿ ಹಾಗೂ ಖಾಲಿ ಹುದ್ದೆ ಮಾಹಿತಿ ಪರಿಶೀಲನೆ ಮಾಡುವ ಬಗ್ಗೆ.

------

ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಈ ಹಿಂದಿನ ಸಾಲಿನ ವರ್ಗಾವಣೆ ಪ್ರಾರಂಭದಲ್ಲಿ ನೀಡಿದಂತೆ ವಿಷಯಾವಾರು ಮಂಜೂರಾದ ಹುದ್ದೆಗಳು, ಪ್ರಸ್ತುತ ದಿನಾಂಕದಂತೆ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಪ್ರಾಥಮಿಕ ಮಾಹಿತಿಯನ್ನು ಪರಿಶೀಲಿಸುವ ಬಗ್ಗೆ ಉಲ್ಲೇಖ–1 ರ ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು. ಪರಿಶೀಲನಾ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕ್ರಮಗಳು, ಪರಿಗಣಿಸಬೇಕಾದ ಅಂಶಗಳ ಬಗ್ಗೆ ದಿನಾಂಕ:–25–08–2020 ರಂದು ಹಾಗೂ ದಿನಾಂಕ:–04–09–2020 ನಡೆಸಲಾದ ವಿಡಿಯೋ ಕಾನ್‌ಫರೆನ್ಸ್‌ಗಳಲ್ಲಿ ಸವಿವರವಾಗಿ ತಿಳಿಸಲಾಗಿತ್ತು.

ಪ್ರಕ್ರಿಯೆಗೆ ಸಂಬಂಧಿಸಿದಂತೆ ಯಾವುದೇ ತಾಂತ್ರಿಕ ಸಮಸ್ಯೆಗಳು ಅಥವಾ ಗೊಂದಲಗಳಿದ್ದಲ್ಲಿ ಈ ಕಛೇರಿಯ ಈ–ಮೇಲ್ ವಿಳಾಸಕ್ಕೆ ಮೇಲ್ ಮಾಡಲು, ಕಡ್ಡಾಯವಾಗಿ ಅದರೊಂದಿಗೆ ಸಂಬಂಧಪಟ್ಟ ಅಧಿಕಾರಿ ಹಾಗೂ ನೋಡಲ್ ಅಧಿಕಾರಿಗಳ ಹೆಸರು ಮತ್ತು ಸಂಪರ್ಕ ಸಂಖ್ಯೆ ನಮೂದಿಸಲು ತಿಳಿಸಲಾಗಿತ್ತು. ಈ ಕಛೇರಿಯಿಂದ ಕಳುಹಿಸುವ ಗೂಗಲ್ ಸ್ಪ್ರೆಡ್ ಶೀಟ್‌ನಲ್ಲಿ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳ ಉಪನಿರ್ದೇಶಕರು(ಆಡಳಿತ), ಕ್ಷೇತ್ರಶಿಕ್ಷಣಾಧಿಕಾರಿಗಳು, ಮತ್ತು ಸಂಬಂಧಿಸಿದ ವರ್ಗಾವಣಾ ನೋಡಲ್ ಅಧಿಕಾರಿಗಳ ಹೆಸರು, ಮೊಬೈಲ್ ಸಂಖ್ಯೆ ಹಾಗೂ ಈ–ಮೇಲ್ ವಿಳಾಸ ದಾಖಲಿಸಲು ಸೂಚನೆ ನೀಡಲಾಗಿತ್ತು. ಆದರೂ ಸಹ ಇದುವರೆವಿಗೂ ಜಿಲ್ಲೆಗಳಿಂದ ಮಾಹಿತಿ ದಾಖಲಿಸಿರುವುದಿಲ್ಲ. ಬಹುತೇಕ ಬಿ.ಇ.ಓ ಕಛೇರಿಗಳಿಂದ ವಿಷಯ ನಿರ್ವಾಹಕರು ದೂರವಾಣಿ ಮೂಲಕ ಈ ಕಛೇರಿಯನ್ನು ಸಂಪರ್ಕಿಸುತ್ತಿರುವುದನ್ನು ಗಮನಿಸಲಾಗಿದೆ. ತಾಲ್ಲೂಕುಗಳಿಂದ ಕಳುಹಿಸಲಾದ ಈ–ಮೇಲ್‌ಗಳಲ್ಲಿ ನೀಡಿರುವ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸಿದಾಗ ಅವರಿಗೆ ಯಾವುದೇ ಮಾಹಿತಿ ಇಲ್ಲದಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಕೆಲವು ತಾಲ್ಲೂಕುಗಳಲ್ಲಿ ಪರಿಶೀಲನಾ ಕಾರ್ಯದ ಪ್ರಗತಿ ಶೂನ್ಯ/ತೀರಾ ಕಡಿಮೆಯಿರುವುದನ್ನು ಗಮನಿಸಲಾಗಿದೆ.

ಆದ್ದರಿಂದ ಪರಿಶೀಲನಾ ಕಾರ್ಯಕ್ಕೆ ಸಂಬಂಧಿಸಿದಂತೆ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರು ತಮ್ಮ ವ್ಯಾಪ್ತಿಯ ಎಲ್ಲಾ ತಾಲ್ಲೂಕುಗಳ ಅಧಿಕಾರಿಗಳ ಸಭೆ ನಡೆಸಿ ಸ್ಪಷ್ಟ ಮಾರ್ಗದರ್ಶನವನ್ನು ನೀಡಲು ಹಾಗೂ ದಿನಾಂಕ:–10–09–2020 ರಂದು ಬೆಳಗ್ಗೆ 11–30 ಗಂಟೆಯೊಳಗೆ ಗೂಗಲ್ ಸ್ಪ್ರೆಡ್ ಶೀಟ್‌ನಲ್ಲಿ ಅಗತ್ಯ ಮಾಹಿತಿಯನ್ನು ಇಂದೀಕರಿಸಲು ಸೂಚಿಸಿದೆ. ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಪದೇ ಪದೇ ಕೇಳುವ ಪ್ರಶ್ನೆಗಳು ಹಾಗೂ ಪರಿಹಾರಗಳನ್ನು ಅನುಸರಿಸಿ ಕ್ರಮವಹಿಸುವುದು ಹಾಗೂ ಪರಿಶೀಲನಾ ಕಾರ್ಯವನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ತಿಳಿಸಿದೆ.

ಈ ಪ್ರಕ್ರಿಯೆಯು ಅತ್ಯಂತ ತುರ್ತು ಮತ್ತು ನಿಖರವಾಗಿ ಮಾಡಬೇಕಾಗಿರುವುದರಿಂದ ಈ ಸುತ್ತೋಲೆಯಲ್ಲಿನ ಅಂಶಗಳು, ನೀಡಲಾದ ಕೈಪಿಡಿಯನ್ನು ಗಮನಿಸಿ ದಿನಾಂಕ:-15-09-2020ರೊಳಗಾಗಿ ಪರಿಶೀಲನಾ ಕಾರ್ಯವನ್ನು ಪೂರ್ಣಗೊಳಿಸಲು ಸೂಚಿಸಿದೆ.

ಈ ಪ್ರಕ್ರಿಯೆಯಲ್ಲಿ ಯಾವುದೇ ಗೊಂದಲಗಳಿದ್ದಲ್ಲಿ ಅಥವಾ ತಾಂತ್ರಿಕ ಸಮಸ್ಯೆಗಳಿದ್ದಲ್ಲಿ transfercellcpi@gmail.com ಗೆ ಈ-ಮೇಲ್ ಮೂಲಕ ಸಂಪರ್ಕಿಸುವುದು.

**ನಿರ್ದೇಶಕರು**
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ
ಭಾಷಾ ಶಾಲೆಗಳ ನಿರ್ದೇಶನಾಲಯ

ಪ್ರತಿಯನ್ನು

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು., ಇವರಿಗೆ ಮಾಹಿತಿಗಾಗಿ.
2. ಅಪರ ಆಯುಕ್ತರು, ಧಾರವಾಡ ಮತ್ತು ಕಲ್ಬುರ್ಗಿ ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
3. ನಿರ್ದೇಶಕರು(ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು., ಇವರಿಗೆ ಮಾಹಿತಿಗಾಗಿ
4. ನಿರ್ದೇಶಕರು(ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು., ಇವರಿಗೆ ಮಾಹಿತಿಗಾಗಿ
5. ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ
6. ಎಲ್ಲಾ ತಾಲ್ಲೂಕುಗಳ ಕ್ಷೇತ್ರಶಿಕ್ಷಣಾಧಿಕಾರಿಗಳು ಸೂಕ್ತ ಕ್ರಮಕ್ಕಾಗಿ
7. ಕಛೇರಿ ಪ್ರತಿ

## ಶಾಲಾವಾರು ಮಂಜೂರಾದ ಹುದ್ದೆಗಳು, ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಮಾಹಿತಿ ಪರಿಶೀಲನೆಗೆ ಸಂಬಂಧಿಸಿದಂತೆ ಪದೇ ಪದೇ ಕೇಳಲ್ಪಡುವ ಪ್ರಶ್ನೆಗಳು ಮತ್ತು ಪರಿಹಾರ

**1) ಪ್ರಾಥಮಿಕ ಶಾಲೆಗಳಲ್ಲಿ ಮಂಜೂರಾದ PST_Maths&Science ಹುದ್ದೆಗೆ ಮ್ಯಾಪ್ ಮಾಡಿದ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ನೇಮಕಾತಿ ವಿಷಯ PST_General_ Kannada ಇರುತ್ತದೆ. ಇಂತಹ ಪ್ರಕರಣಗಳನ್ನು Disagree ಮಾಡಬಹುದೇ?**

**ಉತ್ತರ:-** ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ PST_Maths&Science ಮತ್ತು PST_English ಖಾಲಿಹುದ್ದೆಗೆ PST_General_Kannada ಶಿಕ್ಷಕರನ್ನು ಮ್ಯಾಪ್ ಮಾಡಲಾಗಿದೆ. ಅದೇ ರೀತಿ ಮಾಡಲಾಗಿದೆ. GPT_Maths&Science ಹುದ್ದೆಗೆ PST_Maths&Science ಶಿಕ್ಷಕರನ್ನು ಮ್ಯಾಪ್ ಮಾಡಲಾಗಿದೆ. ಮುಖ್ಯಶಿಕ್ಷಕರು . ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ವಿಶೇಷ ಶಿಕ್ಷಕರನ್ನು ಮತ್ತು ಆಯಾ ಮಂಜೂರಾದ ಹುದ್ದೆಗೆ ಮ್ಯಾಪ್ ಮಾಡಲಾಗಿರುತ್ತದೆ. ಅದರಂತೆ ಪರಿಶೀಲಿಸಿ Agree ಮಾಡುವುದು.

**2) ಪ್ರೌಢಶಾಲೆಗಳಲ್ಲಿ ದೈ.ಶಿ.ಶಿ.ಗ್ರೇಡ್-1 ಹುದ್ದೆ ಮಂಜೂರಾಗಿದ್ದು, ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಗ್ರೇಡ್-2 ಅಗಿರುತ್ತಾರೆ. ಇಂತಹ ಪ್ರಕರಣಗಳನ್ನು Disagree ಮಾಡಬಹುದೇ?**

**ಉತ್ತರ:-**ಎಲ್ಲಾ ಪ್ರೌಢಶಾಲೆಗಳಲ್ಲಿ ದೈ.ಶಿ.ಗ್ರೇಡ್-2 ಹುದ್ದೆಯನ್ನೇ ಮಂಜೂರಾದ ಹುದ್ದೆ ಎಂದು ತೋರಿಸಲಾಗಿದೆ. ಗ್ರೇಡ್-2 ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿರುವವರೆಗೆ ಅವರನ್ನು ಪರಿಗಣಿಸಲಾಗುವುದು. ಗ್ರೇಡ್-2 ಶಿಕ್ಷಕರ ನಿವೃತ್ತಿ/ವರ್ಗಾವಣೆ ಮತ್ತಿತರೆ ಕಾರಣಗಳಿಂದ ಹುದ್ದೆ ಖಾಲಿಯಾದ ತಕ್ಷಣ ಅದನ್ನು ಗ್ರೇಡ್-1 ಎಂದು ಪರಿಗಣಿಸಲಾಗುವುದು. ಆದ್ದರಿಂದ ಇಂತಹ ಪ್ರಕರಣಗಳನ್ನು ಪರಿಶೀಲಿಸಿ Agree ಮಾಡುವುದು

**3) 2019-20 ನೇ ಸಾಲಿನಲ್ಲಿ ಶೂನ್ಯ ದಾಖಲಾತಿ ಹೊಂದಿದ ಪ್ರಾಥಮಿಕ ಶಾಲೆಗಳಲ್ಲಿ ಮಂಜೂರಾದ ಹುದ್ದೆಗಳನ್ನು ಕಡಿತಗೊಳಿಸಲು ಕೋರಿ Disagree ಮಾಡಬಹುದೇ?**

**ಉತ್ತರ:-** ಅಂತಹ ಶಾಲೆಗಳನ್ನು ತಾತ್ಕಾಲಿಕವಾಗಿ ಮುಚ್ಚಿದ ಶಾಲೆಗಳೆಂದು ಪರಿಗಣಿಸಿ ಮಂಜೂರಾದ ಹುದ್ದೆ ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಮಾಹಿತಿಯನ್ನು ಪರಿಶೀಲಿಸಲು ಕ್ರಮ ಕೈಗೊಳ್ಳುವುದು.

**4) ಈ ಹಿಂದೆ ತಾತ್ಕಾಲಿಕವಾಗಿ ಮುಚ್ಚಲ್ಪಟ್ಟ ಶಾಲೆಗಳನ್ನು ಪ್ರಸ್ತುತ ವರ್ಗಾವಣಾ ತಂತ್ರಾಂಶದಲ್ಲಿ ಮಂಜೂರಾದ ಹುದ್ದೆ ಮತ್ತು ಶಿಕ್ಷಕರ ಮಾಹಿತಿ ಪರಿಶೀಲನೆಗೆ ತಂತ್ರಾಂಶದಲ್ಲಿ ಲಭ್ಯವಾಗುತ್ತಿಲ್ಲ, ಪರಿಶೀಲಿಸುವುದು ಹೇಗೆ?**

**ಉತ್ತರ:-** ಈಗಾಗಲೇ ಈ ಹಿಂದಿನ ವರ್ಷಗಳಲ್ಲಿ ತಾತ್ಕಾಲಿಕವಾಗಿ ಮುಚ್ಚಲ್ಪಟ್ಟಿದ್ದ ಶಾಲೆಗಳ ಪಟ್ಟಿಯನ್ನು ಸಲ್ಲಿಸಲು ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಸೂಚಿಸಿದ್ದು, ಮಾಹಿತಿ ಸಲ್ಲಿಕೆಯಾದ ನಂತರ ಪರಿಶೀಲನೆಗೆ ನೀಡಲಾಗುವುದು.

**5) ಜಿ.ಪಿ.ಟಿ_ಸಮಾಜವಿಜ್ಞಾನ ಹುದ್ದೆ ಮಂಜೂರಾಗಿದ್ದು, ಸದರಿ ಹುದ್ದೆಯಲ್ಲಿ ಜಿ.ಪಿ.ಟಿ._ಭಾಷೆ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದು, ಮಂಜೂರಾದ ಹುದ್ದೆಯನ್ನು ಜಿಪಿಟಿ_ಭಾಷೆ ಎಂದು ಬದಲಾಯಿಸಲು ಕೋರಿದೆ.**

**ಉತ್ತರ:-** ಹುದ್ದೆ ಮಂಜೂರಾತಿ ಪ್ರಕ್ರಿಯೆಯನ್ನು ಸರ್ಕಾರದ ಮಾರ್ಗಸೂಚಿಯಂತೆ ಮಾಡಲಾಗಿದೆ. ಈ ಹಿಂದೆ ನೇಮಕಾತಿಯಾಗಿದ್ದ ಕರ್ತವ್ಯನಿರ್ವಹಿಸುತ್ತಿರುವ ಜಿ.ಪಿ.ಟಿ._ಸಾಮಾನ್ಯ ಶಿಕ್ಷಕರ ವಿಷಯವನ್ನು ತಮ್ಮ ಹಂತದಲ್ಲಿ ಜಿ.ಪಿ.ಟಿ_ಕನ್ನಡ ಎಂದು ಬದಲಾಯಿಸಿಕೊಂಡಿರುವುದ -ರಿಂದ ಈ ವ್ಯತ್ಯಾಸ ಉಂಟಾಗಿದ್ದು, , ಮಂಜೂರಾದ ಹುದ್ದೆಯ ವಿಷಯ ಬದಲಾವಣೆ ಸಾಧ್ಯವಿಲ್ಲ.

**5) ಹಿರಿಯ ಪ್ರಾಥಮಿಕ ಶಾಲೆಯ 2019-20 ನೇ ಸಾಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ 59 ಕ್ಕಿಂತ ಕಡಿಮೆ ಆಗಿದ್ದು, ಮುಖ್ಯಶಿಕ್ಷಕರ ಹುದ್ದೆ ಅಗತ್ಯವಿಲ್ಲವೆಂದು ನಮೂದಿಸಬಹುದೇ?**

**ಉತ್ತರ:-** ಹುದ್ದೆ ಮಂಜೂರಾತಿ ಸಂಖ್ಯೆಯನ್ನು ಈ ಹಿಂದಿನ ಸಾಲಿನ ವರ್ಗಾವಣೆ ಪ್ರಾರಂಭಕ್ಕೆ ಮುನ್ನ ಲೆಕ್ಕಿಸಿ ನೀಡಲಾಗಿದ್ದು, ಪ್ರಸ್ತುತ ವರ್ಷದಲ್ಲಿ ವಿದ್ಯಾರ್ಥಿ ಸಂಖ್ಯೆಗನುಗುಣವಾಗಿ ಮರುಲೆಕ್ಕಿಸುವಂತಿಲ್ಲ.

**6) ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಲ್ಲಿ ಕೆಲವರು ವರ್ಗಾವಣೆ/ಬಡ್ತಿಯಿಂದ ಬೇರೆ ಶಾಲೆಗೆ ಹೋಗಿದ್ದು, ತಂತ್ರಾಂಶದಲ್ಲಿ ಈ ಶಾಲೆಯಿಂದ ಅವರ ಹೆಸರನ್ನು ತೆಗೆಯಲು ಕೋರಿದೆ.**

**ಉತ್ತರ:-** ಪ್ರಸ್ತುತ ತಂತ್ರಾಂಶದಲ್ಲಿ ಲಭ್ಯವಿರುವ ಶಿಕ್ಷಕರ ಮಾಹಿತಿಯಲ್ಲಿ ವ್ಯತ್ಯಾಸಗಳು ಕಂಡುಬಂದಲ್ಲಿ ಪರಿಶೀಲಿಸಿ, ಸೂಕ್ತ ಕಾರಣವನ್ನು ಆಯ್ಕೆಮಾಡಿ ಸಂಕ್ಷಿಪ್ತ ಮತ್ತು ನಿಖರ ಷರಾದೊಂದಿಗೆ Disagree ಮಾಡಿ Submit ಮಾಡುವುದು.

**7) ಪ್ರೌಢಶಾಲೆಯಲ್ಲಿ ಸರ್ಕಾರಿ ಆದೇಶದಂತೆ ಮುಖ್ಯಶಿಕ್ಷಕರ ಹುದ್ದೆ ಮಂಜೂರಾಗಿರುವುದಿಲ್ಲ. ಆದರೆ ತಂತ್ರಾಂಶದಲ್ಲಿ ತೋರಿಸಲಾಗಿದೆ. ಅದನ್ನು ಹೇಗೆ ಪರಿಗಣಿಸುವುದು?**

**ಉತ್ತರ:-** ಪ್ರೌಢಶಾಲೆಯಲ್ಲಿ ಸರ್ಕಾರಿ ಆದೇಶದಂತೆ ಮುಖ್ಯಶಿಕ್ಷಕರ ಹುದ್ದೆ ಮಂಜೂರಾಗಿಲ್ಲದಿದ್ದಲ್ಲಿ, ಅಂತಹ ಹುದ್ದೆಯನ್ನು Disagree ಮಾಡಿ, Sanctioned Post ಕಾರಣ ಆಯ್ಕೆ ಮಾಡಿ ಸೂಕ್ತ ಷರಾ ದಾಖಲಿಸಿ Submit ಮಾಡುವುದು.

**8) ಪ್ರೌಢಶಾಲೆಯಲ್ಲಿ ಸರ್ಕಾರಿ ಆದೇಶದಂತೆ ದೈಹಿಕ ಶಿಕ್ಷಕರು ಗ್ರೇಡ್-2 ಹುದ್ದೆ ಮಂಜೂರಾಗಿದ್ದು, ಗ್ರೇಡ್-2 ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆದರೆ ತಂತ್ರಾಂಶದಲ್ಲಿ ದೈಹಿಕ ಶಿಕ್ಷಕರು ಗ್ರೇಡ್-1 ಹುದ್ದೆ ಮಂಜೂರಾಗಿರುವುದಾಗಿದೆ ನೀಡಲಾಗಿದೆ. ಇಂತಹ ಪ್ರಕರಣಗಳನ್ನು Disagree ಮಾಡಬಹುದೇ?**

**ಉತ್ತರ:-** ಪ್ರಸ್ತುತ ಎಲ್ಲಾ ಪ್ರೌಢಶಾಲೆಗಳಿಗೆ ದೈಹಿಕ ಶಿಕ್ಷಕರು ಗ್ರೇಡ್-1 ಹುದ್ದೆಯನ್ನೇ ಮಂಜೂರಾದ ಹುದ್ದೆಗಳೆಂದು ನೀಡಲಾಗಿದೆ. ಅಂತಹ ಹುದ್ದೆಗಳಲ್ಲಿ ಗ್ರೇಡ್-2 ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ ಅವರನ್ನು ಮ್ಯಾಪ್ ಮಾಡಲಾಗಿದೆ. ಅಂತಹ ಪ್ರಕರಣಗಳಿದ್ದಲ್ಲಿ ಅದರಂತೆ ಪರಿಶೀಲಿಸಿ Agree ಮಾಡುವುದು. ಗ್ರೇಡ್-2 ಶಿಕ್ಷಕರು ನಿವೃತ್ತಿ ಅಥವಾ ಇನ್ನಿತರೆ ಕಾರಣಗಳಿಂದ ಹುದ್ದೆ ಖಾಲಿಯಾದಲ್ಲಿ ಆ ಹುದ್ದೆಯನ್ನು ಗ್ರೇಡ್-1 ಹುದ್ದೆಯೆಂದು ಪರಿಗಣಿಸಲಾಗುವುದು.

**9) ಪ್ರಾಥಮಿಕ ಶಾಲೆಯಲ್ಲಿ 2019-20 ನೇ ಸಾಲಿನ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಲೆಕ್ಕಿಸಿದಾಗ ಪ್ರಸ್ತುತ ನೀಡಿರುವ ಸಹಶಿಕ್ಷಕರ ಹುದ್ದೆಗಳು ಹೆಚ್ಚುವರಿಯಾಗುತ್ತವೆ. ಅಂತಹ ಹುದ್ದೆಗಳನ್ನು Disagree ಮಾಡಬಹುದೇ?**

**ಉತ್ತರ:-** ಹುದ್ದೆ ಮಂಜೂರಾತಿ ಸಂಖ್ಯೆಯನ್ನು ಈ ಹಿಂದಿನ ಸಾಲಿನ ವರ್ಗಾವಣೆ ಪ್ರಾರಂಭಕ್ಕೆ ಮುನ್ನ ಲೆಕ್ಕಿಸಿ ನೀಡಲಾಗಿದ್ದು, ಪ್ರಸ್ತುತ ವರ್ಷದಲ್ಲಿ ವಿದ್ಯಾರ್ಥಿ ಸಂಖ್ಯೆಗನುಗುಣವಾಗಿ ಮರುಲೆಕ್ಕಿಸುವಂತಿಲ್ಲ.

**10) ಪ್ರಾಥಮಿಕ/ಪ್ರೌಢಶಾಲೆಯಲ್ಲಿ ತಂತ್ರಾಂಶದಲ್ಲಿ ವಿಶೇಷ ಶಿಕ್ಷಕರ ಮಂಜೂರಾದ ಹುದ್ದೆಯನ್ನು ನೀಡಿರುವುದಿಲ್ಲ. ಆದರೆ ಸರ್ಕಾರದ ಆದೇಶದಂತೆ ಸದರಿ ಶಾಲೆಯಲ್ಲಿ ವಿಶೇಷ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅದನ್ನು ಹೇಗೆ ಇಂದೀಕರಿಸುವುದು?**

**ಉತ್ತರ:-** ಪ್ರಾಥಮಿಕ/ಪ್ರೌಢಶಾಲೆಯಲ್ಲಿ ಈ ಹಿಂದೆ ಸರ್ಕಾರದ ಆದೇಶದಂತೆ ಮಂಜೂರಾದ ವಿಶೇಷ ಶಿಕ್ಷಕರ ಹುದ್ದೆ ಇದ್ದು, ಪ್ರಸ್ತುತ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ ಅದನ್ನು ADD POST ಆಯ್ಕೆ ಮಾಡಿ ದಾಖಲಿಸುವುದು.

**11) ಕಿರಿಯ ಪ್ರಾಥಮಿಕ ಶಾಲೆಯಲ್ಲಿ 2019-20ನೇ ಸಾಲಿನ ಮಕ್ಕಳ ಸಂಖ್ಯೆ 10 ಕ್ಕಿಂತ ಕಡಿಮೆಯಿದ್ದು, ಎರಡು ಸಹಶಿಕ್ಷಕರ ಹುದ್ದೆ ಮಂಜೂರಾತಿ ಇರುತ್ತದೆ. ಒಂದು ಸಹಶಿಕ್ಷಕ ಹುದ್ದೆಯನ್ನು ಕಡಿಮೆ ಮಾಡಬಹುದೇ?**

**ಉತ್ತರ:-**ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ 10 ಕ್ಕಿಂತ ಕಡಿಮೆಯಿದ್ದು, ಎರಡು ಸಹಶಿಕ್ಷಕರ ಹುದ್ದೆ ಮಂಜೂರಾತಿ ಇದ್ದಲ್ಲಿ ಹುದ್ದೆ ಕಡಿಮೆ ಮಾಡುವಂತಿಲ್ಲ.